## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 05(ಜಕ್ಕೂರು)
## ವಾರ್ಡ್‌ಸಮಿತಿ ಸಭೆ, ದಿನಾಂಕ: 20.11.2021 ರ
## ಸಭಾ ನಡುವಳಿ

ದಿನಾಂಕ: 20.11.2021 ರಂದು ಬೆಳ್ಳಿಗೆ 11.30 ಗಂಟೆಗೆ ವಾರ್ಡ್ ನಂ.05 ಜಕ್ಕೂರು ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಯಕ ಕಾರ್ಯಪಾಲಕ ಅಭಿಯಂತರರು. ಬ್ಯಾಟರಾಯನಪುರ ಉಪ ವಿಭಾಗ ಕಛೇರಿ, ದಾಸರಹಳ್ಳಿ, ಇಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಜಿ ದೇವರಾಜ್ | ನೋಡಲ್ ಅಧಿಕಾರಿ, ವಾರ್ಡ್ ನಂ. 05(ಜಕ್ಕೂರು) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ) |
| 2 | ವೈ.ಎನ್ ಮಹಂತೇಶ್ ಕುಮಾರ್ | ಕಾರ್ಯದರ್ಶಿಗಳು, ವಾರ್ಡ್ ಕಮಿಟಿ ವಾರ್ಡ್ ನಂ. 06 , ಮತ್ತು ಸಹಾಯಕ ಅಭಿಯಂತರರು |
| 3 | ಡಾ|| ಮುರಳಿಧರ್ | ವೈದ್ಯಾಧಿಕಾರಿ, ಅಗ್ರಹಾರ ಬಡಾವಣೆ ಪ್ರಾ.ಆ.ಕೇಂ |
| 4 | ಸೋಮಶೇಖರ್ | ವ್ಯವಸ್ಥಾಪಕರು, ಸ.ಕಂ.ಅ ಬ್ಯಾ.ಉ.ವಿ |
| 5 | ಶ್ರೀ ಜಿ. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 05 |
| 6 | ಶ್ರೀ ಅಶ್ವಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 05 |
| 7 | ಶ್ರೀನಿವಾಸ್ | ವಿದ್ಯುತ್ ವಿಭಾಗ |
| 8 | ಬಿ.ಎನ್ ನಾಗರಾಜು | ಇಂಜಿನಿಯರಿಂಗ್ ವಿಭಾಗ |

ಶ್ರೀ ವೈ.ಎನ್ ಮಹಂತೇಶ್ ಕುಮಾರ್ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಈ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮುಖ ವಿಷಯಗಳ ಬಗ್ಗೆ ವಿವರಿಸುತ್ತಾ ಸದರಿ ಸಭೆಯ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಮುಜಾಗ್ರತ ಕ್ರಮಗಳ ಬಗ್ಗೆ.** ವಾರ್ಡ್ ಸ.ಅ ರವರು ಮಾತನಾಡಿ ಬೆಂಗಳೂರು ನಗರದಲ್ಲಿ ಕರೋನಾ ಸೊಂಕು ದಿನೇ ದಿನೇ ಕಡಿಮೆಯಾಗುತ್ತಿದ್ದು, ಆದುದರಿಂದ ಸಾರ್ವಜನಿಕರು ಮುನ್ನಚ್ಚರಿಕೆಯಾಗಿ ಕಡ್ಡಾಯವಾಗಿ ಸಮಾಜಿಕ ಅಂತರ ಮತ್ತು ಮಾಸ್ಕ್‌ಗಳ ಬಳಕೆಗೆ ಅಗತ್ಯಾವಾಗಿರುತ್ತದೆಂದು ಎಂದು ಸಭೆಗೆ ತಿಳಿಸಿದರು.



Scanned by CamScanner

2. ಮಳೆಯಿಂದಾಗಿ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿ ಹೆಚ್ಚಾಗಿದ್ದು, ಈ ಬಗ್ಗೆ ಸಾರ್ವಜನಿಕರು ದೂರು ಸಲ್ಲಿಸುತ್ತಿರುತ್ತರೆ ಹಾಗೂ ವಾಹನ ಸವಾರರಿಗೆ ತುಂಬ ತೊಂದರೆಯಾಗುತ್ತಿರುತ್ತದೆ ಆದುದರಿಂದ ಸದರಿ ರಸ್ತೆಗಳಲ್ಲಿ ರಸ್ತೆ ಗುಂಡಿ ಮುಚ್ಚಲು ತುರ್ತಾಗಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

3. ಹೆಚ್ಚಿನ ಮಳೆಯಿಂದಾಗಿ ವಾರ್ಡ್ ವ್ಯಾಪ್ತಿಯ ಕೋಗಿಲು, ಪಾಲನಹಳ್ಳಿ ಮತ್ತು ಬೆಳ್ಳಹಳ್ಳಿ ಕೆರೆಗಳು ತುಂಬಿದ್ದು, ಬೆಳಹಳ್ಳಿ ಕೆರೆಯಿಂದ ಹೆಚ್ಚಿನ ನೀರು ಅಕ್ಕಪಕ್ಕದ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಮನೆಗಳಿಗೆ ನೀರು ನುಗ್ಗಿರುತ್ತದೆ ಈ ಬಗ್ಗೆ ತಾತ್ಕಾಲಿಕವಾಗಿ ಮಳೆ ನೀರುಗಾಲುವೆಯಲ್ಲಿ ತುಂಬಿರುವ ಹೂಳನ್ನು ತೆಗೆದು ನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

4. ಡಾ॥ ಮುರಳಿಧರ್, ವೈದ್ಯಾಧಿಕಾರಿಗಳು ಮಾತನಾಡಿ ಅಗ್ರಹಾರ ಬಡಾವಣೆಯ ಪ್ರಥಾಮಿಕ ಆರೋಗ್ಯ ಕೇಂದ್ರದ ಕಟ್ಟಡದ ಮೇಲ್ಚಾವಣೆಯು ಸೋರಿಕೆಯಾಗುತ್ತಿದ್ದು, ಕ್ರಮ ವಹಿಸುವಂತೆ ಕೋರಿದರು ಹಾಗೂ ಕೇಂದ್ರ ಕಟ್ಟಡದ ಆವರಣದಲ್ಲಿರುವ ಉದ್ಯಾನವನದಲ್ಲಿ ವಿಷಜಂತುಗಳೂ ಹೆಚ್ಚಾಗಿದ್ದು, ಸಂಬಂಧಪಟ್ಟವರಿಂದ ನಿರ್ವಹಣೆ ಮಾಡುವಂತೆ ಕೋರಿದರು.

5. ಅಗ್ರಹಾರ ಬಡಾವಣೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಾಗಿ ಬೇಕಾಗಿರುವ ಪರಿಕರಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಖರೀದಿಸಲು ಅನುಮೋದೆ ನೀಡುವಂತೆ ಕೋರಿದರು.
ವಾರ್ಡ್ ವ್ಯಾಪ್ತಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಥಣಿಸಂದ್ರ ಮುಖ್ಯರಸ್ತೆಯಿಂದ ರೇವಾ ಕಾಲೇಜು ಮುಖಾಂತರ ಬಾಗಲೂರು ಕ್ರಾಸ್‌ವರೆವಿಗೂ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿದ್ದು, ಈ ಬಗ್ಗೆ ವಿಜಯಕರ್ನಾಟಕ ದಿನ ಪತ್ರಿಕೆಯಲ್ಲಿ ವರಧಿಯಾಗಿರುತ್ತದೆ. ಆದುದರಿಂದ ಈ ಪ್ರದೇಶದಲ್ಲಿ ಸಾರ್ವಜನಿಕರು ಕಸವನ್ನು ರಸ್ತೆ ಬದಿ ಎಸೆಯದಂತೆ ಕ್ರಮ ವಹಿಸಲು ಪಾಲಿಕೆಯ ಮಾರ್ಷಲ್‌ಗಳನ್ನು ನಿಯೋಗಿಸಲು ಹಾಗೂ ಸದರಿ ಬ್ಲಾಕ್‌ಸ್ಪಾಟ್‌ನ ಕಸವನ್ನು ತೆಗೆಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚುವರಿ ಆಟೋ ಟಿಪ್ಪರ್ ಮತ್ತು ಕೂಲಿ ಕಾರ್ಮಿಕರನ್ನು ಒದಗಿಸುವಂತೆ ಕೋರಿದರು.

6. ಬೆಸ್ಕಾಂ ಇಲಾಖೆಯಿಂದ ಕೇಬಲ್ ಅಳವಡಿಸುವ ಜಾಗದಲ್ಲಿ ಸರಿಯಾಗಿ ರಸ್ತೆಯನ್ನು ಮುಚ್ಚದೇ ಸಾರ್ವಜನಿಕರಿಗೆ ತುಂಬ ತೊಂದರೆಯಗುತ್ತಿರುತ್ತದೆ ಇದರಿಂದ ಬೆಸ್ಕಾಂ ಇಲಾಖೆಯವರಿಗೆ ಈ ಬಗ್ಗೆ ಸೂಚನೆ ನೀಡಲು ಸಾರ್ವಜನಿಕರು ಕೋರಿದರು.

7. ಈ ಹಿಂದೆ ಸಿ.ಎಂ.ಸಿ ಪ್ರದೇಶಗಳಲ್ಲಿ ಕೊರೆಯಲಾಗಿರುವ ಬೋರ್‌ವೆಲ್‌ಗಳ ನಿರ್ವಹಣೆಯನ್ನು ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಯವರು ಸಮಪರ್ಕವಾಗಿ ನಿರ್ವಹಿಸದೇ ಇರುವುದರಿಂದ ಈ ಕಛೇರಿಗೆ ಹಲವಾರು ದೂರುಗಳು ಬರುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು.

8. ವಾರ್ಡ್ ವ್ಯಾಪ್ತಿಯಲ್ಲಿ ಬೀದಿನ ದೀಪಗಳ ನಿರ್ವಹಣೆಗೆ ಸರಿಯಾಗಿ ನಡೆಸುತ್ತಿರುವುದಿಲ್ಲವೆಂದು ಸಾರ್ವಜನಿಕರು ಕೋರಿದರು, ಈ ಬಗ್ಗೆ ಮಾನ್ಯ ನೊಡೆಲ್ ಅಧಿಕಾರಿಗಳು ಪಾಲಿಕೆಯ ವಿದ್ಯುತ್ ವೀಭಾಗದ ಅಧಿಕಾರಿಗಳಿಗೆ ಕರೆ ಮಾಡಿ ಚರ್ಚಿಸಿ ಈ ಸಭೆಗೆ ಯಾವುದೇ ಅಧಿಕಾರಿಗಳು ಬಂದಿರುವುದಿಲ್ಲ ಮುಂದಿನ



Scanned by CamScanner

ಸಭೆಗೆ ತಪ್ಪದೇ ಹಾಜರಾಗಿ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ವರಧಿ ನೀಡಲು ಸೂಚನೆ ನೀಡಿದರು. ಹಾಗೂ ಮುಂದಿನ ಸಮಿತಿ ಸಭೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬೆಸ್ಕಾಂ, ಪೋಲಿಸ್ ಹಾಗೂ ಪಾಲಿಕೆಯ ವಿದ್ಯುತ್ ವಿಭಾಗ, ಉದ್ಯಾನವನದ ನಿರ್ವಹಣೆಯ ವಿಭಾಗದ ಅಧಿಕಾರಿಗಳು ತಪ್ಪದೇ ಹಾಜರಿರುವಂತೆ ಕ್ರಮ ವಹಿಸಲು ಕಾರ್ಯದರ್ಶಿಯವರಿಗೆ ಸೂಚಿಸಿದರು.

9. ಬಿ.ಎನ್ ನಾಗರಾಜು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಸಾರ್ವಜನಿಕರು ಈ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳೂ ಹಾಗೂ ಪಾಲಿಕೆಯ ಅಧಿಕಾರಿಗಳ ಬಗ್ಗೆ ಪ್ರಶಂಶೆ ವ್ಯಕ್ತಪಡಿಸುತ್ತಿರುವುದಾಗಿ ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು ಹಾಗೂ ಕೋವಿಡ್-19ರ ಸಂಬಂಧ ಮೇಲಾಧಿಕಾರಿಗಳಿಂದ ಬರುವ ಸೂಚನೆ ಮತ್ತು ಆದೇಶಗಳನ್ನು ನಿಯಮಾಸುಸಾರ ಪಾಲಿಸುವಂಥೆ ಹಾಗೂ ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸೂಚಿಸುತ್ತಾ ಮುಂದಿನ ಸಭೆಗೆ ಸಂಬಧಪಟ್ಟ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರುವಂಥೆ ಕ್ರಮ ವಹಿಸಲು ಕಾರ್ಯದರ್ಶಿಯವರಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 05(ಜಕ್ಕೂರು)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 05, (ಜಕ್ಕೂರು)
22/10/2021

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.



Scanned by CamScanner